ಮಾಗಡಿಯ ಹೊಸಪೇಟೆ ಸರ್ಕಲ್‌ನಲ್ಲಿ ನಿವೇಶನ ಹಂಚಿಕೆಯ ಬಗ್ಗೆ

113 (444) ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ) : ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಜಿಲ್ಲೆ ಮಾಗಡಿ ಪಟ್ಟಣದ ಹೊಸಪೇಟೆ ಸರ್ಕಲ್ ನಲ್ಲಿ ಮಾಡಿರುವ ಐ.ಡಿ.ಎಸ್.ಎಂ.ಟಿ ಯೋಜನೆಯನ್ನು ಯಾವಾಗ ಜಾರಿಗೆ ತರಲಾಯಿತು ಹಾಗೂ ಇದರ ಸ್ವರೂಪವೇನು;

ಆ) ಈ ಲೇಔಟ್‌ನಲ್ಲಿ ಎಷ್ಟು ನಿವೇಶನಗಳನ್ನು ವಿತರಿಸಲಾಗಿದೆ;

ವಿತರಿಸಲಾಗಿರುವ ನಿವೇಶನದ ಫಲಾನುಭವಿಗಳ ಸಂಪೂರ್ಣ ವಿಳಾಸ ಹಾಗೂ ವಿವರಣೆ ನೀಡುವುದು;

ಇ) ಇನ್ನೂ ಹಂಚಿಕೆಯಾಗದೆ ಉಳಿದಿರುವ ನಿವೇಶನಗಳೆಷ್ಟು; ಸಂಪೂರ್ಣ ವಿವರ ನೀಡುವುದು?

ಶ್ರೀ ಬಾಲಚಂದ್ರ ಜಾರಕಿಹೊಳಿ (ಪೌರಾಡಳಿತ ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು) :

ಅ) ದಿನಾಂಕ: 19.12.1984 ರಿಂದ ಜಾರಿಗೆ ಬಂದಿರುತ್ತದೆ. ಪುರಸಭೆಯ ಆದಾಯದ ಮೂಲವನ್ನು ಹೆಚ್ಚಿಸಿಕೊಳ್ಳುವುದು ಇದರ ಉದ್ದೇಶ ಮತ್ತು ಸ್ವರೂಪವಾಗಿರುತ್ತದೆ.

ಆ) ಈ ಲೇಔಟ್‌ನಲ್ಲಿ ಒಟ್ಟು 389 ನಿವೇಶನಗಳು ರಚಿಸಲಾಗಿರುತ್ತದೆ. ಈ ಪೈಕಿ 197 ನಿವೇಶನಗಳನ್ನು ವಿತರಿಸಲಾಗಿದೆ.

ವಿತರಿಸಲಾಗಿರುವ ನಿವೇಶನದ ಫಲಾನುಭವಿಗಳ ಸಂಪೂರ್ಣ ವಿವರ ಕಡತ ಮಾನ್ಯ ಕರ್ನಾಟಕ ಲೋಕಾಯುಕ್ತರವರು ಅಕ್ಟೋಬರ್ 2007 ನೇ ಸಾಲಿನಲ್ಲಿ ಪರಿಶೀಲನೆಗಾಗಿ ತೆಗೆದುಕೊಂಡು ಹೋಗಿದ್ದು, ಪರಿಶೀಲನೆಯ ಹಂತದಲ್ಲಿರುತ್ತದೆ.

ಇ) 192 ಖಾಲಿ ನಿವೇಶನಗಳು ಹಂಚಿಕೆಯಾಗಿರುವುದಿಲ್ಲ. ಸಂಪೂರ್ಣ ವಿವರ ಕಡತ ಮಾನ್ಯ ಕರ್ನಾಟಕ ಲೋಕಾಯುಕ್ತರ ಅಕ್ಟೋಬರ್ 2007ನೇ ಸಾಲಿನಲ್ಲಿ ಪರಿಶೀಲನೆಗಾಗಿ ತೆಗೆದುಕೊಂಡು ಹೋಗಿದ್ದು, ಪರಿಶೀಲನೆಯ ಹಂತದಲ್ಲಿರುತ್ತದೆ.